**ಓ.ಎಸ್ ನಂ. 90/2023 ಡಿ.ಡಬ್ಲ್ಯೂ-1 (ಪ್ರೇಮ)**

**ಸಾಕ್ಷಿಯನ್ನು ದಿನಾಂಕಃ 04.12.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಜಿ ಎನ್ ಎನ್ ವಕೀಲರಿಂದಃ**

ದಾವಾಸ್ತಿಯುು ಸಿದ್ದೇಗೌಡ ರ ಹೆಸರಿಗೆ ಖಾತೆಯಾದ ಬಗ್ಗೆ ಎಂ ಆರ್ ಅನ್ನು ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಸದರಿ ದಾಖಲಾತಿಯನ್ನು ಹಾಜರುಡಿಸಿದರೆ ಸತ್ಯ ತಿಳಿದುಬರುತ್ತದೆ ಎಂದು ಹಾಜರುಪಡಿಸದೆ ಇದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ 10 ಪಹಣಿ ಪತ್ರಿಕೆಯಂತೆ ದಾವಾಸ್ತಿ ಸಿದ್ದೇಗೌಡರಿಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ನಮ್ಮ ತಾತನ ಆಸ್ತಿ ಎಂದು ನುಡಿಯುತ್ತಾರೆ. ಸಿದ್ದೇಗೌಡ ಮತ್ತು ಜವರೇಗೌಡ ಇಬ್ಬರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸಿದ್ದೇಗೌಡರು ಜವರೇಗೌಡರ ಮಗ ಆಗಿಲ್ಲದೇ ಇದ್ದರೂ ಸಹ ವಾದಿಗಳಿಗೆ ತಿಳಿಯದ ಹಾಗೆ ಅವರವರ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಜವರೇಗೌಡರ ಮಗ ಸಿದ್ದೇಗೌಡ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

ನಿಡಿ 1 ದಾನಪತ್ರವನ್ನು ನನ್ನ ಅಕ್ಕ ಚಾಮಮ್ಮ ಪ್ರತಿವಾದಿ 3 ರವರು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ 3 ರವರಿಗೆ ನಿಡಿ 1 ರಲ್ಲಿರುವ ಆಸ್ತಿಯು ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅವರಿಗೆ ನಮ್ಮ ತಂದೆಯವರು ದಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 3 ರವರಿಗೆ ಅದ ದಾನ ಪತ್ರದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಸಾಕ್ಷಿಗೆ ನೀವೇ ಹಾಜರುಪಡಿಸಿರುವ ನಿಡಿ 1 ರಂತೆ ಪ್ರತಿವಾದಿ 3 ರವರಿಗೆ ಅದರಲ್ಲಿ ತೋರಿಸಿರುವ ಆಸ್ತಿಯು ವಿಲ್ ಮುಖಾಂತರ ಬಂದಿರುತ್ತದೆ ಎಂದು ಹೇಳಿ ಬರೆಸಲಾಗಿರುತ್ತದೆ ಎಂದರೆ ಸಾಕ್ಷಿಯು ಪುನಃ ಹೌದು ನಮ್ಮ ಅಕ್ಕನವರಿಗೆ

ವಿಲ್ ಮುಖಾಂತರ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ ವಿಲ್ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದರ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತೇವೆ ಎಂದು ನುಡಿಯುತ್ತಾರೆ. ನಿಡಿ 11 ರಂತೆ ಚಾಮಮ್ಮ ನವರಿಗೆ ವಿಭಜನೆ ಆಗಿ ಸ. ನಂ 34/11 ರಲ್ಲಿ 1 ಎಕರೆ 8 ಗಂಟೆ ತೋರಿಸಲಾಗಿರುತ್ತದೆ ಎಂದರೆ ಅದು ಸುಳ್ಳಾಗಿ ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ನಿಡಿ 12 ರ ದಾಖಲಾತಿಯಲ್ಲಿಯು ಸಹ ನನ್ನ ಹೆಸರಿಗೆ ವಿಭಜನೆಯಾಗಿ ಬಂದಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಅದು ಸುಳ್ಳು ಎಂದು ನುಡಿಯುತ್ತಾರೆ. ದಾವಾಸ್ತಿಯು ಸಿದ್ದೇಗೌಡರ ಹೆಸರಿನಲ್ಲಿದ್ದು ಆ ಆಸ್ತಿಯು ವಾದಿಗಳಿಗೆ ಸೇರಿರುತ್ತದೆ ಆದರು ಸಹಿತ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ವಿಲ್, ದಾನಪತ್ರಗಳನ್ನು ಸೃಷ್ಟಿ ಮಾಡಿಕೊಂಡು ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಹೆಸರಿಗೆ ಖಾತೆ ಆಗಿರುವುದನ್ನು ಪ್ರಶ್ನಿಸಿ ವಾದಿಗಳು ಹುಣಸೂರು ಕಂದಾಯ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮೇಲೆ ಹೂಡಿರುತ್ತಾರೆ ಅದು ಈಗ ವಜಾ ಅಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯ ಆದೇಶ ನಿಡಿ 9 ರಂತೆ ಉಪ ವಿಭಾಗಧಿಕಾರಿಗಳು ಆ ದಾವೆಯಲ್ಲಿನ ಮೇಲ್ಮನವಿದಾರರು ತಮ್ಮ ಹಕ್ಕಿನ ಸಂಬಂಧ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಆದೇಶಿಸಿರುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಡಿ 3,15,16 ಮತ್ತು 17 ದಾಖಾಲೆಗಳನ್ನು ಹೊರತು ಪಡಿಸಿ ಉಳಿದೆಲ್ಲಾ ದಾಖಲಾತಿಗಳು 2023 ನೇ ಇಸವಿಯಲ್ಲಿ ಪಡೆದುಕೂಂಡ ದಾಖಲಾತಿಗಳು ಆಗಿರುತ್ತವೆ ಎಂದರೆ ಸರಿ. ನಾನಗಲೀ ನನ್ನ ಸಹೋದರ ಸಹೋದರಿಯರಾಗಲೀ ಯಾರು ಸಹ ವಿದ್ಯಾಭ್ಯಾಸ ಮಾಡಿರುವುದಿಲ್ಲ ಮತ್ತು ಶಾಲೆಗೆ ಹೋಗಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ವಾದಿಗಳ ಹಕ್ಕಿಗೆ ಬಾದಕವಾಗುವುದಿಲ್ಲ

ಎಂದರೆ ಸರಿಯಲ್ಲ. ಸಿದ್ದೇಗೌಡರಿಗೆ ದಾವಾಸ್ತಿಯನ್ನು ಪರಭಾರೆ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾಸ್ತಿಯು ಅವರ ತಾಯಿಯಿಂದ ಬಂದಿರುವುದರಿಂದ ಸಿದ್ದೇಗೌಡರಿಗೆ ಆಗಲೀ ನಮಗೆ ಆಗಲೀ ಯಾವುದೇ ಹಕ್ಕುಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ